ಒಂದು ಕಾಫಿ ಅಂಗಡೀಲೆ ಇತ್ತು. ಅರೆರೆ ಮೊನ್ನೆ ನಿಮ್ಮೂರವರೇ, ಬಾಬಣ್ಣ ಅಂತೆ ನೋಡಿ ಅವರು, ವೈದ್ರು" ಎಂದ. ಬಾಬಣ್ಣ ಅಪರಿಚಿತನೇನಲ್ಲ. ಅವನ ಹತ್ತುಹಲವು ಅವತಾರಗಳನ್ನು ನೋಡಿಯಾಗಿದೆ. ಸೈಕಲ್ ಮೇಲೆ ಬಾಳೆಕಾಯಿ ವ್ಯಾಪಾರದಿಂದ ಶುರುವಾಗಿ ಬಯಲಾಟದ ರಾತ್ರಿ ಚಿಮ್ಣಿ ಬೆಳಕಲ್ಲಿ ಇಸ್ಪೀಟಾಡಿಸಿ ದುಡ್ಡು ಗಂಟು ಹಾಕಿದ ಪುರುಷ ಅವನು. ಹೊಟ್ಟೆಪಾಡಿಗೆ ಅವನು ಮಾಡದ ದಂಧೆಯೇ ಇಲ್ಲ. ಮಂಚಿಕೇರಿಯ ಕಾಲ ಚಕ್ರದ ಕೀಲಿ ಕೈಯನ್ನು ಅವನೇ ರಹಸ್ಯವಾಗಿ ಇಟ್ಟುಕೊಂಡಿದ್ದಾನೆ. ಈ ಜಗದೋದ್ಧಾರ, ಸೂತ್ರದಾರ ತನ್ನ ಪುಸ್ತಕವನ್ನು ಕೊಂಡುಕೊಂಡದ್ದು ಯಾಕಿರಬಹುದೆಂದು ಯೋಚಿಸಿದ. ಮರುದಿನವೇ ಪೇಟೆಯಲ್ಲಿ ಬಾಬಣ್ಣನ ದರ್ಶನವಾಯಿತು. ಅವನೇ ಮಾತಿಗಾರಂಭಿಸಿ, "ಹರಿಗದ್ದೆ ಜಮೀನು ನೋಡೋದಕ್ಕೆ ನೀವು ಹೋಗಿದ್ದು ತಿಳೀತು. ಆದ್ರೆ ಅದು ಮುಳಗಡೆ ಆಗ್ತದೆ. ಗಣೇಶ್ ಪಾಲ ಹೊಳೆಗೆ ಡ್ಯಾಮ್ ಕಟ್ಟೋದಕ್ಕೆ ಸರ್ವೆ ಮಾಡ್ಕಂಡು ಹೋಗಿದ್ದಾರೆ. ಹಗಲು ಕಂಡ ಬಾವೀಲಿ ರಾತ್ರಿ ಬೀಳ್ಬೇಡಿ ಅಂದೆ" ಎಂದ. "ಯಾರು ಹೇಳಿದ್ರು ನಿನಗೆ?" ಕೇಳಿದ. "ನಿಮ್ಮ ಕಥೆ ಪುಸ್ತಕಾನ ನೀವೇ ಹುಡ್ಕತಾ ಇದ್ರಂತೆ" ಎಂದವನೆ ಕರಿ ಹ್ಯಾಂಡ್ ಬ್ಯಾಗಿನಿಂದ ಬಾಯಿಂಡ್ ಹಾಕಿದ ಪುಸ್ತಕವನ್ನು ಹೊರತೆಗೆದ. ಪ್ರೀತಿಯಿಂದ ಎಂದು ಸಹಿಯೊಂದಿಗೆ ಯಾರಿಗೊ ನೀಡಿದ ಪುಸ್ತಕ ಅದು. ಧಾರೆ ಎರೆದು ಕೊಟ್ಟ ಹೊಟ್ಟೆಯ ಮಗಳು ಹೊಸ್ತಿಲಾಚೆ ನಿಂತಂತೆ ತನ್ನದಾಗಿಯೂ ಅದು ಅನ್ಯರ ಆಸ್ತಿ ಎನಿಸಿತು. "ಜಗತ್ತಿನ ಸುದ್ದಿ ಯಾರು ಹೇಳ್ತಾರೆ ನಿನಗೆ?" "ನನಗೆ ಮಂಚಿಕೇರಿ ಬಿ.ಬಿ.ಸಿ. ಅಂತಾರೆ" ಎಂದ. "ಕಥೆ ಬಾಳ ಮಜಾ ಅದೆ ಹಾಂ" ಎಂದು ರಸ್ತೆಯಲ್ಲಿ ಹೋಗುತ್ತಿರುವ ಯಾರನ್ನೊ ಕರೆಯುತ್ತ ಓಡಿದ.

ಅಂದು ಮಾಲತಿಯಿಂದಾದ ಮಂಗಳರಾತಿಗೆ ಹುಟ್ಟಿದ ಪ್ರತಿಕಾರದ ರೋಷ ಬಾಬಣ್ಣನೊಳಗೆ ಬುಸುಗುಟ್ಟತ್ತಲಿತ್ತು. ನನ್ನ ಹೊರಗಿಟ್ಟು ಈ ಅಬಲಿಷ್ಟ ಹೆಂಗಸು ಜಮೀನನ್ನು ಹೇಗೆ ಮಾರಾಟ ಮಾಡುತ್ತಾಳೆ ನೋಡೇಬಿಡುತ್ತೇನೆ ಎಂದು ಛಲಕ್ಕೆ ಬಿದ್ದ. ತಿರುಮಲನ ಸ್ನೇಹದ ಫಲವಾಗಿ ಅವನ ಮರಣೋತ್ತರ ಸಂಸಾರದ ಉಸ್ತುವಾರಿಯನ್ನು ಅಗತ್ಯಕ್ಕಿಂತ ಹೆಚ್ಚು ಆವೇಶದಲ್ಲಿ ವಹಿಸಿದ್ದ. ಮಾರಾಟ ವ್ಯವಹಾರದಲ್ಲಿ ಮಧ್ಯವರ್ತಿಯಾಗಿದ್ದರೆ ಅವನಿಗೆ ಲಾಭವಿತ್ತು. ಹರಿಗದ್ದೆಯ ಜಮೀನು ನೋಡಲು ಮಂಚಿಕೇರಿಗೆ ಬಂದಿಳಿದ ಗಿರಾಕಿಗಳಿಗೆ, 'ಅದು ಮುಳಗಡೆ ಪ್ರದೇಶ' ಎಂದು ಹೇಳಿ ವಾಪಸ್ ಕಳುಹಿಸುವ ಆಟ ಶುರು ಮಾಡಿದ. ಮಾಲತಿಗೆ ಅನುಮಾನ ಬಾರದಿರಲೆಂದು ಒಂದು ಪಾರ್ಟಿಯನ್ನು ಹರಿಗದ್ದೆಗೆ ಕರೆದೊಯ್ದು ಕಡಿಮೆ ರೇಟಿಗೆ ಕೇಳಿಸಿದ. ಈ ನಡುವೆ ಸದಾನಂದ ತನ್ನ ಗೆಳೆಯನಿಗೆ ಹರಿಗದ್ದೆಯನ್ನು ತೋರಿಸಿಕೊಂಡು ಬಂದ ಸಮಾಚಾರ ಬಾಬಣ್ಣನನ್ನು ಕೆರಳಿಸಿತು. ತಿರುಮಲ ಸತ್ತಾಗ ಎಲ್ಲ ಸಹಾಯವನ್ನು ತನ್ನಿಂದ ಪಡೆದು ಈಗ ದೂರವಿಡುತ್ತಿದ್ದಾಳೆ ಎಂದು ವ್ಯಗ್ರನಾಗಿದ್ದ. ಅವನ ಬಹುಮಾನಿತ ಕಥೆ 'ಹರಿಗದ್ದೆಯ ಹುಡುಗಿ'ಯ ಹುಡುಗಿ ಸಂಪದಳೆಂದೂ ಕಥೆಯಲ್ಲಿ ನಿರೂಪಿತವಾದ ವಿಷಯಗಳು ವಾಸ್ತವವೆಂದೂ ಮಂಚಿಕೇರಿಯ ಕಿರಾಣಿ ಅಂಗಡಿಯಲ್ಲಿ ಬಾಬಣ್ಣ ಸಾಮಾನು ಕಟ್ಟಿಸಿಕೊಳ್ಳುತ್ತಿದ್ದಾಗ ಸಂಜೆ ಕಾಲಕ್ಷೇಪಕ್ಕೆ ಬಂದವರು ಲೋಕಾಭಿರಾಮ ಆಡುತ್ತಿದ್ದ ಹರಟೆಯನ್ನು ಕೇಳಿಸಿಕೊಂಡಿದ್ದ. ಆಟ ಆಡಿಸಲು ಬೇಕಾದ ಸಾಮಗ್ರಿ ಆ ಕಥಾಪ್ರಸಂಗದಲ್ಲಿ ಇದೆ ಎಂದು ಹೊಳೆದ ಕೂಡಲೆ ಅವನು ಚುರುಕಾದ. ಅವನು ಸಿರ್ಸಿಯ ಸೆಕೆಂಡ್ ಹ್ಯಾಂಡ್ ಪುಸ್ತಕ ಅಂಗಡಿಗೆ ಭೇಟಿ ನೀಡಿದ್ದು ಇದೇ ಕಾರಣಕ್ಕಾಗಿತ್ತು. ಸದಾನಂದ ವಿರಚಿತ ಕಥೆಯನ್ನು ಮೂರು ಬಾರಿ ಓದಿದ ನಂತರ ಬಾಬಣ್ಣನಿಗೆ ಅದೊಂದು ದುರಂತಮಯ ಪ್ರೇಮಕತೆ ಎಂದು